

# ಟೀನೇಜ್ ಹುಡುಗಿಯರಿಗೆ ಉಡುಗೊರೆಗಳು

**ಈ ಕಾಲಕ್ಕೆ ಉಡುಗೊರೆ ಸಂಭ್ರಮ ಕಳೆಗಟ್ಟುತ್ತದೆ. ಗಿಫ್ಟ್ ಯುವ ಮನಸ್ಸುಗಳನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತದೆ. ಹರೆಯದ ಹೆಣ್ಣುಮಕ್ಕಳಿಗೆ ನೆನಪಿನ ಕಾಣಿಕೆಯಾಗಿ ಏನು ಕೊಡಬಹುದು ಎನ್ನುವ ಜಿಜ್ಞಾಸೆಗೆ ಇಲ್ಲಿದೆ ಆಪ್ತ ಸಲಹೆ.**

■ **ರಮಣ್ ಶೆಟ್ಟಿ ರಂಜಾಳ್**

ನಾಲ್ಕೈದು ದಶಕಗಳ ಹಿಂದೆ ಕ್ರಿಸ್ಮಸ್ ಹಬ್ಬ ಮತ್ತು ಹೊಸ ವರ್ಷ ಬಂತೆಂದರೆ ಗ್ರೀಟಿಂಗ್ಸ್ ಕಾರ್ಡುಗಳ ವಿನಿಮಯ, ವಿಶೇಷವಾಗಿ ಅಂಚೆ ಮೂಲಕ ತುಂಬಾ ಮುತುವರ್ಜಿಯಿಂದ ಸಾಗುತ್ತಿತ್ತು. ಬಂಧು ಮಿತ್ರರಿಂದ ಬರುವ ಈ ಗ್ರೀಟಿಂಗ್ಸ್ ಕಾರ್ಡ್ ಕಾಯುವುದೇ ರೋಮಾಂಚನ.

ಯೂರೋಪಿಯನ್ ದೇಶಗಳಲ್ಲಿ ವಾರಪೂರ್ತಿ ಉಡುಗೊರೆಗಳ ವಿನಿಮಯಗಳು ಕೂಡ ನಡೆಯುತ್ತಿದ್ದವು. ಈಗ ಗ್ರೀಟಿಂಗ್ಸ್ ಕಾರ್ಡುಗಳ ಅಂಚೆ ರವಾನೆ ಕಡಿಮೆಯಾಗಿದ್ದರೂ ಬೆರಳ ತುದಿಯೊತ್ತಿ ಆರ್ಡರ್ ಮಾಡಬಹುದಾದ ಉಡುಗೊರೆಗಳ ವಿನಿಮಯ ಹೆಚ್ಚಿದೆ. ಅದೀಗ ಎಲ್ಲಾ ಹಬ್ಬಗಳಲ್ಲೂ ರೂಢಿಗೆ ಬಂದು ಬಹು ಶತಕೋಟಿ ಡಾಲರ್ ಉದ್ಯಮವಾಗಿ ಬೆಳೆದುನಿಂತಿದೆ.

ಉಡುಗೊರೆ ಆಯ್ಕೆ ಮಾಡುವಾಗ ಪ್ರೀತಿಪಾತ್ರರನ್ನು ಮನಗಂಡು ಅನನ್ಯ ಉಡುಗೊರೆ ಆರಿಸಬೇಕಾಗುತ್ತದೆ. ಅವರ ಆಸಕ್ತಿ ಮತ್ತು ಅಗತ್ಯ ಆಯ್ಕೆಯ ಮಾನದಂಡವಾಗುತ್ತದೆ. ಏಕೆಂದರೆ ಉಡುಗೊರೆ ಸ್ಮರಣೀಯ ಆಗಬೇಕು. ಉಡುಗೊರೆ ತೆರೆಯುವಾಗ ಸ್ವೀಕರಿಸುವವರ ಕಣ್ಣುಗಳಲ್ಲಿ ಸಂತೋಷದ ಮಿಂಚನ್ನು ಮೂಡಿಸುವಂತಿದ್ದರೆ ಅದಕ್ಕೊಂದು ಸಾರ್ಥಕತೆ!

### ಗಿಫ್ಟ್ ಹೇಗಿದ್ದರೆ ಚಂದ?

ಮಹಿಳೆಯರಿಗೆ ಹೆಚ್ಚಾಗಿ ಆಭರಣಗಳು ಮೊದಲ ಆಯ್ಕೆಯಾಗಿರುತ್ತವೆ. ಇಂದಿನ ಹದಿಹರೆಯದವರಿಗೆ ಶೂ ಮತ್ತು ಬಟ್ಟೆಗಳು ಸೂಕ್ತವೆನಿಸಬಹುದು. ಟ್ರೆಂಡಿಂಗ್ ಫ್ಯಾಷನ್ ಆಗಿದ್ದರೆ ಇನ್ನೂ ಖುಷಿಯಾಗುತ್ತಾರೆ. ಹುಡುಗಿಯರಿಗೆ ಸ್ಮಾರ್ಟ್ ಜ್ಯುವೆಲರಿ, ಪೋರ್ಟೆಬಲ್ ಫೋಟೊ ಪ್ರಿಂಟರ್, ಇ–ರೀಡರ್, ಪರಿಸರಸ್ನೇಹಿ ಬಟ್ಟೆಗಳು, ಸ್ಕಿನ್ ಕೇರ್ ಕಿಟ್, ಪರ್ಸನಲೈಸ್ಡ್ ಪ್ಲಾನರ್, ವೈರ್‌ಲೆಸ್ ಇಯರ್‌ಬಡ್ಸ್ ಉತ್ತಮ ಆಯ್ಕೆಗಳು. ಸ್ಮಾರ್ಟ್ ಜ್ಯುವೆಲ್ಲರಿ ಅಲಂಕಾರಕ್ಕೆ ಮಾತ್ರ ಸೀಮಿತವಾಗಿಲ್ಲ. ಆರೋಗ್ಯ ಪರೀಕ್ಷೆ, ಸಮಯ, ಹವ್ಯಾಸ ಟ್ರ್ಯಾಕಿಂಗ್ ಅಲರ್ಟ್ ಸೌಲಭ್ಯ ಪಡೆಯಬಹುದು. ಉಂಗುರ, ಬಳೆ, ನೆಕ್ಲೇಸ್ ಹುಡುಕಬಹುದು.

ಇದು ಫ್ಯಾಷನ್ ಮತ್ತು ಟೆಕ್ನಾಲಜಿಯ ಅದ್ಭುತ ಮಿಶ್ರಣವಾಗಿದ್ದು ಇದರ ಮೂಲಕ ಹುಡುಗಿಯರು ಸ್ಟೈಲಿಶ್ ಆಗಿ ಕಾಣಿಸಲು ನೆರವಾಗುತ್ತವೆ ಎಂದು ಫ್ಯಾಷನ್ ಜಗತ್ತು ಅಂದಾಜಿಸಿದೆ.



- ಇ–ರೀಡರ್ ಅಥವಾ ಟ್ಯಾಬ್ಲೆಟ್: ಸೃಜನಶೀಲತೆಯನ್ನು ಉತ್ತೇಜಿಸುವ ಎಲೆಕ್ಟ್ರಾನಿಕ್ ಸಾಧನ.